# ಭೂವರಾಹನಾಥ ಭೂ ಒಡೆಯ

ಇತ್ತೀಚೆಗೆ ಪಾಂಡವಪುರಕ್ಕೆ ಭೇಟಿ ಕೊಟ್ಟಾಗ ಅಲ್ಲಿನ ಪುಣ್ಯಕ್ಷೇತ್ರದ ಬಗ್ಗೆ ಪರಿಚಯವಾಯಿತು. ಅದೇ ಲಕ್ಷ್ಮೀವರಾಹನಾಥ ಸ್ವಾಮಿ ಕ್ಷೇತ್ರ. ಇಲ್ಲಿನ ದೇವರನ್ನು ಭೂವರಾಹನಾಥ ಸ್ವಾಮಿ, ಪ್ರಳಯ ವರಾಹನಾಥ ಸ್ವಾಮಿ ಎಂದೂ ಕರೆಯುತ್ತಾರೆ. ವಿಷ್ಣುವಿನ ಮೂರನೇ ಅವತಾರವಾದ ವರಾಹನಾಥನನ್ನು ಇಲ್ಲಿ ಪ್ರತಿಷ್ಠಾಪಿಸಲಾಗಿದೆ. ಈ ಕ್ಷೇತ್ರವು ಮಂಡ್ಯ ಜಿಲ್ಲೆಯ ಕಲ್ಲಹಳ್ಳಿಯ ಹೇಮಾವತಿ ನದಿಯ ಪಶ್ಚಿಮ ದಂಡೆಯಲ್ಲಿದೆ. ದೇವಸ್ಥಾನ ಹೊಸದಾಗಿದ್ದರೂ ಮೂಲ ವಿಗ್ರಹವು ಕಪ್ಪು ಶಿಲೆಯದ್ದಾಗಿದೆ. ಇದಕ್ಕೆ ಸುಮಾರು ಎರಡು ಸಾವಿರ ವರ್ಷಗಳ ಇತಿಹಾಸವಿದೆ. ವಿಗ್ರಹವು ಸುಮಾರು 16 ಅಡಿ ಎತ್ತರವಿದ್ದು, ಸ್ವಾಮಿಯ ಎಡ ತೊಡೆಯ ಮೇಲೆ ಭೂದೇವಿಯು ಆಸೀನಳಾಗಿದ್ದಾಳೆ. ಸ್ವಾಮಿಯು ಚತುರ್ಭುಜನಾಗಿದ್ದು ಶಂಖ ಚಕ್ರಗಳನ್ನು ಹಿಡಿದಿದ್ದಾನೆ. ಬಲಗೈಯಲ್ಲಿ ಅಭಯ ಮುದ್ರೆಯನ್ನು ತೋರುತ್ತಾ, ಎಡಗೈಯಲ್ಲಿ ಭೂದೇವಿಯನ್ನು ಆಲಿಂಗಿಸಿದ್ದಾನೆ. ಇದು ಈ ವಿಗ್ರಹದ ವಿಶೇಷತೆಗಳಲ್ಲೊಂದು. ಸ್ಥಳೀಯರ ಪ್ರಕಾರ ಗೌತಮ ಮಹರ್ಷಿ ಈ ಜಾಗದಲ್ಲಿ ತಪಗೈದು ನಂತರ ವಿಗ್ರಹವನ್ನು ಪ್ರತಿಷ್ಠಾಪಿಸಿದ್ದಾರೆ.

ಒಮ್ಮೆ ವೀರ ಬಲ್ಲಾಳ ಎಂಬ ರಾಜನು ಬೇಟೆಗೆಂದು ಕಾಡಿಗೆ ಹೋಗಿದ್ದಾಗ ದಣಿವಾರಿಸಿಕೊಳ್ಳಲು ಒಂದು ದಿಬ್ಬದ ಮೇಲಿನ ಮರದ ಕೆಳಗೆ ಕುಳಿತುಕೊಂಡನಂತೆ. ಆ ಸಮಯದಲ್ಲಿ ಬೇಟೆ ನಾಯಿಯೊಂದು ಮೊಲವನ್ನು ಅಟ್ಟಿಸಿಕೊಂಡು ಬರುತ್ತಿರುವುದನ್ನು ನೋಡುತ್ತಾನೆ. ಅವೆರಡೂ ದಿಬ್ಬದ ಬಳಿ ಬಂದೊಡನೆ ಮೊಲವೇ ಹಿಂತಿರುಗಿ ಬೇಟೆ ನಾಯಿಯನ್ನು ಅಟ್ಟಿಸಿಕೊಂಡು ಹೋಗುವುದನ್ನು ಕಂಡ ಬಲ್ಲಾಳನಿಗೆ, ಈ ಘಟನೆಗೆ ಸಾಕ್ಷಿಯಾದ ದಿಬ್ಬದಲ್ಲಿ ಏನೋ ಶಕ್ತಿ ಇರಬೇಕೆನಿಸಿ ಅದನ್ನು ಅಗೆಸುತ್ತಾನೆ. ದಿಬ್ಬವನ್ನು ಅಗೆದಾಗ ಅಲ್ಲಿ ಈ ಮೂರ್ತಿಯು ಕಾಣುತ್ತದೆ. ನಂತರದಲ್ಲಿ ರಾಜನು ಈ ವಿಗ್ರಹವನ್ನು ಪ್ರತಿಷ್ಠಾಪಿಸಿ ಪೂಜಿಸತೊಡಗುತ್ತಾನೆ.

—ಮೇಘನಾ ಗೌರೀಶ್ ಉಪ್ಪೂರ, ಬೆಂಗಳೂರು






# ರೈಲು ಟಿಕೆಟ್ ಹೀಗೂ ಇತ್ತು!

ನೀವು 90ರ ದಶಕ ಅಥವಾ ಅದಕ್ಕೂ ಮೊದಲು ರೈಲಿನಲ್ಲಿ ಪ್ರಯಾಣಿಸುತ್ತಿದ್ದ ಯಾತ್ರಿಕರಾಗಿದ್ದರೆ ನಿಮಗೆ ಈ ಚಿತ್ರದಲ್ಲಿರುವ ಟಿಕೆಟ್‌ಗಳ ಬಗ್ಗೆ ತಿಳಿದಿರುತ್ತದೆ. ರೈಲ್ವೆ ಇಲಾಖೆಯು ಆಗಿನ್ನೂ ಕಂಪ್ಯೂಟರೀಕೃತವಾಗಿರಲಿಲ್ಲ. ಕಾಲಾನುಕ್ರಮೇಣ ದೊಡ್ಡ ದೊಡ್ಡ ರೈಲು ನಿಲ್ದಾಣಗಳು ಕಂಪ್ಯೂಟರೀಕರಣಗೊಂಡರೂ ಅದು ಪುಟ್ಟ ಪುಟ್ಟ ನಿಲ್ದಾಣಗಳನ್ನು ಬಹುಬೇಗ ವ್ಯಾಪಿಸಿಲ್ಲ. ಅಂತಹ ಸಂದರ್ಭದಲ್ಲಿ ಪುಟ್ಟ ಪುಟ್ಟ ನಿಲ್ದಾಣಗಳಲ್ಲಿ ನೀಡುತ್ತಿದ್ದ ಟಿಕೆಟ್‌ಗಳಿವು. ಈ ಟಿಕೆಟ್‌ಗಳಲ್ಲಿ ಅವುಗಳ ಸಂಖ್ಯೆ, ಪ್ರಯಾಣದ ದಿನಾಂಕ, ಸ್ಥಳ (ಎಲ್ಲಿಂದ ಎಲ್ಲಿಯವರೆಗೆ), ಹಣದ ಬಗ್ಗೆ ಮಾಹಿತಿ ಇರುತ್ತಿತ್ತು. ಇದನ್ನು ಅವರು ಒಂದು ಯಂತ್ರದ ಮೂಲಕ ಪಂಚ್ ಮಾಡಿ ಮುದ್ರಿಸಿಕೊಡುತ್ತಿದ್ದರು.

—ಕೆ.ಪಿ. ಅಶ್ವಿನ್ ರಾವ್, ಮಂಗಳೂರು

# ತೆರೆಮರೆಗೆ ರೈಲುಚೊಂಬು



ಹಿಂದಿನ ಕಾಲದಲ್ಲಿ ಒಂದು ಊರಿನಿಂದ ಇನ್ನೊಂದು ಊರಿಗೆ ಪ್ರಯಾಣ ಮಾಡುವಾಗ ಸಿಕ್ಕ ಸಿಕ್ಕಲ್ಲಿ ಹೋಟೆಲುಗಳಿಗೆ ತಿಂಡಿ ತಿನ್ನಲು ಹೋಗುತ್ತಿರಲಿಲ್ಲ. ಬಹುಶಃ ಮಡಿ ಸಾಕಾಗುತ್ತಿರಲಿಲ್ಲ ಎಂದೋ ಏನೋ. ಹಾಗಾಗಿ ದಾರಿ ಖರ್ಚಿಗೆ ಅಗತ್ಯವಾದ ತಿಂಡಿ, ನೀರನ್ನು ಮನೆಯಿಂದಲೇ ತೆಗೆದುಕೊಂಡು ಹೋಗಲಾಗುತ್ತಿತ್ತು. ಈಗಿನಂತೆ ನೀರು ತುಂಬಿಕೊಂಡು ಹೋಗಲು ಬಿಸ್ಲರಿಯಂತಹ ಬಾಟಲಿಗಳೂ ಆಗ ಸಿಗುತ್ತಿರಲಿಲ್ಲ. ಆದ್ದರಿಂದ ಎಲ್ಲರ ಮನೆಗಳಲ್ಲೂ ಹಿತ್ತಾಳೆಯ ರೈಲುಚೊಂಬನ್ನು ಇಟ್ಟುಕೊಂಡಿರುತ್ತಿದ್ದರು. ಪ್ರಯಾಣದ ಹಿಂದಿಯ ದಿನ ಅದನ್ನು ಹುಣಸೆಹಣ್ಣು ಹಾಕಿ, ಫಳ ಫಳ ಅಂತ ಹೊಳೆಯುವಂತೆ ತೊಳೆದು, ನೀರು ತುಂಬಿಸಿಕೊಂಡು ಹೋಗುತ್ತಿದ್ದರು. ಅದರ ಒಳಗೆ ಸರಿಯಾಗಿ ಕುಳಿತುಕೊಳ್ಳುವ ಒಂದು ಪುಟ್ಟ ಹಿತ್ತಾಳೆಯ ಲೋಟವೂ ಇರುತ್ತಿತ್ತು. ನೀರು ಸೋರದಂತೆ ಭದ್ರವಾದ ತಿರುಪಿನ ಮುಚ್ಚಳ, ಹಿಡಿದುಕೊಳ್ಳಲು ಹಿಡಿಯ ಅನುಕೂಲವೂ ಇರುತ್ತಿತ್ತು. ಇಂದು ಪ್ಲಾಸ್ಟಿಕ್ ಬಾಟಲಿಗಳ ಯುಗ ಆರಂಭವಾಗಿ ಎಲ್ಲವೂ ಮೂಲೆಗುಂಪಾಗಿದೆ. ಆದರೂ ಕೆಲವಾರು ಮನೆಗಳಲ್ಲಿ ಹಳೆಯ ವಸ್ತುಗಳನ್ನು ಇಂದಿಗೂ ಜಾಗ್ರತೆಯಿಂದ ಕಾಪಾಡಿಕೊಂಡಿದ್ದಾರೆ. ಇದು ನನ್ನ ಅಕ್ಕನ ಮನೆಯಲ್ಲಿನ ಸಂಗ್ರಹದ ಚೊಂಬು.

—ಶೃತಿ ಎಸ್., ಬೆಂಗಳೂರು